## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 723/2024

**ಸಾಕ್ಷಿಯನ್ನು ದಿಃ 09.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ರವಿ ನಂದನ್ | ಸಿಡಬ್ಲ್ಯೂಃ 5 | ಪಿಡಬ್ಲ್ಯೂಃ 4 |
| ತಂದೆಯ ಹೆಸರು | ಸಚ್ಚಿಂದ್ರ ಕುಮಾರ್ | | |
| ವಯಸ್ಸು | 23 ವರ್ಷ | | |
| ಕೆಲಸ | ವಿದ್ಯಾರ್ಥಿ. | | |
| ವಾಸಸ್ಥಳ | ಬ್ಯಾಡರಹಳ್ಳಿ, ಕೆ ಆರ್ ನಗರ. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಸಾಕ್ಷಿ ನಿಪಿ–2 ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 06.03.2023 ರಂದು ಕಲಕುಣಿಕೆಯ ಜವರೇಗೌಡರ ಬೀದಿಯಲ್ಲಿ ನನ್ನ ಚಿಕ್ಕಪ್ಪನಿಗೆ ಹೊಡೆದ ಬಗ್ಗೆ ಪೊಲೀಸರು ಮಹಜರು ಮಾಡಿದಾಗ ಹಾಕಿದ್ದೇನೆ. ಆಗ ಚಾಸಾ–2 ರವರು ಹಾಜರಿದ್ದು ಸ್ಥಳ ತೋರಿಸಿದ್ದರೆ, ಆ ಸಮಯದಲ್ಲಿ ಚಾಸಾ–4 ರವರು ಸಹ ಹಾಜರಿದ್ದರು, ನಿಪಿ–2 ರಮಹಜರನ್ನು ಬೆಳಿಗ್ಗೆ 10.00 ರಿಂದ 10.30 ರವರೆಗೆ ಮಾಡಿದ್ದಾರೆ. ಮಹಜರು ಸಮಯದಲ್ಲಿ ಒಂದು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡರು, ಅದನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿ ನ್ಯಾಯಾಲಯದ ಮುಂದಿರುವ ಮು ಮಾ –1 ನ್ನು ನೋಡಿ ಗುರುತಿಸುತ್ತಾರೆ. ನಿಪಿ–2 ರಲ್ಲಿ ಬರೆದ ವಿಷಯಗಳು ಗೊತ್ತಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ವಕೀಲರಿಂದಃ**

ಕೃತ ನಡೆದ ಸ್ಥಳಕ್ಕೂ ನನ್ನ ಊರಿಗೂ 19 ಕಿ ಮೀ ದೂರ ಇದೆ. ಗಲಾಟೆಯಾದಾಗ ನಾನು ಇರಲಿಲ್ಲ. ಗಲಾಟೆಯಾಯಿತು ಎಂದು ಚಿಕ್ಕಮ್ಮ ಹೇಳಿದರು. ಮಹಜರಿಗೆ ಬರುವಂತೆ ಪೊಲೀಸರು ನೋಟೀಸು ಕೊಟ್ಟಿಲ್ಲ ಫೋನ್ ಮಾಡಿದ್ದರು. ನಿಪಿ–2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ–2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ

ಹಾಕಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ರವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.